**OS. No. 55/2022** **DW - 1**

ಪ್ರಮಾಣೀಕರಿಸಲಾದ ದಿನಾಂಕಃ **23.07.2026**

<u>ಪಾಟೀ ಸವಾಲು ವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ</u>

(1) ನಾನು ಬಿ.ಎ.ಪದವಿಧರನಾಗಿರುತ್ತೇನೆ. ನಮ್ಮದು ಮೂಲತಃ ತಿಪಟೂರು ತಾಲ್ಲೂಕು, ಕಿಬ್ಬನಹಳ್ಳಿ ಹೋಬಳಿ ಗಡಬನಹಳ್ಳಿ ಗ್ರಾಮ ಎಂದರೆ ಸರಿ. ನಮ್ಮ ತಂದೆಯವರೊ 4 ಜನ ಅಣ್ಣ-ತಮ್ಮಂದಿರು. ನಮ್ಮ ತಂದೆ ಹಾಗೂ ಅವರ ಅಣ್ಣ -ತಮ್ಮಂದಿರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಸವಿರುತ್ತಾರೆ ಎಂದರೆ ಸರಿ. ಗಡಬನಹಳ್ಳಿ ಗ್ರಾಮದಲ್ಲಿ ನಮ್ಮ ತಂದೆಗೆ ವಿಭಾಗದಲ್ಲಿ ಬಹಳಷ್ಟು ನಿವೇಶನ ಹಾಗೂ ಮನೆ ಬಂದಿದ್ದವು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ನಮ್ಮ ತಂದೆಗಿಂತ ತಾಯಿಯೇ ಬುದ್ದಿವಂತರು ಎಂದರೆ ಸರಿಯಲ್ಲ ನಮ್ಮ ತಂದೆಯವರೇ ಬುದ್ದಿವಂತರು. ನಮ್ಮ ತಂದೆ ಜೀವಿತ ಅವಧಿಯಲ್ಲಿಯೇ ಗಡಬನಹಳ್ಳಿಯಲ್ಲಿನ ಆಸ್ತಿಗಳು ಅವರ ಒಪ್ಪಿಗೆ ಮೇರೆಗೆ ನನ್ನ ತಾಯಿಯ ಹೆಸರಿಗೆ ಖಾತೆಯಾಗಿದ್ದವು ಎಂದರೆ ಸರಿ. ನಮ್ಮ ತಂದೆಗೆ ಅಷ್ಟು ವ್ಯವಹಾಕಿಕ ಜ್ಞಾನ ಇಲ್ಲ ಬೇಗ ಮೋಸ ಹೋಗುತ್ತಾರೆ ಆಸ್ತಿಗಳು ಪೋಲಾಗುತ್ತವೆ ಎಂಬ ಕಾರಣಕ್ಕೆ ನಮ್ಮ ತಾಯಿಯ ಹೆಸರಿಗೆ ದಾಖಲೆಗಳನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ.

(2) ನನ್ನ ತಾಯಿಯ ತವರು ಮನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಸಬಾ ಹೋಬಳಿ ದರಬೇನಹಳ್ಳಿ ಗ್ರಾಮ ಎಂದರೆ ಸರಿ. ನನ್ನ ತಾಯಿಯ ತಂದೆ-ತಾಯಿ ಒಟ್ಟು 4 ಜನ ಹೆಣ್ಣು ಮಕ್ಕಳು ಎಂದರೆ ಸರಿ. ಅವರದು ಕೂಲಿಕಾರ್ಮಿಕ ಹಾಗೂ ರೈತಾಪಿ ಬಡ ಕುಟುಂಬ ಎಂದರೆ ಸರಿಯಲ್ಲ ಅವರಿಗೆ 12 ಎಕರೆ ಜಮೀನು ಇತ್ತು.ನನ್ನ ತಾಯಿಗೆ ಅವರ ತಂದೆ ಕಡೆಯಿಂದ ಆಸ್ತಿ ಬಂದಿರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. 12 ಎಕರೆ ನನ್ನ ತಾಯಿಯವರ ತಂದೆಗೆ ಜಮೀನು ಇತ್ತು ಎಂಬುದನ್ನು ತೋರಿಸಲು ದಾಖಲೆ ಇರುವುದಿಲ್ಲ ಅವರು ಮಾರಾಟ ಮಾಡಿರುತ್ತಾರೆ. ನಮ್ಮ ತಾಯಿ ತಂದೆ ನಂಜಪ್ಪರವರ ಜಮೀನು ಮಾರಾಟವಾದ ಮಾಡಿದ ಬಗ್ಗೆ ದಾಖಲೆ ಇರುವುದಿಲ್ಲ. ಗಡಬನಹಳ್ಳಿ ಇದ್ದ ನನ್ನ ತಾಯಿಯ ಹೆಸರಿನಲ್ಲಿ

ಇದ್ದ ಎಲ್ಲಾ ಆಸ್ತಿಗಳು ನನ್ನ ತಂದೆಯವರಿಗೆ ಭಾಗದಲ್ಲಿ ಬಂದ ಆಸ್ತಿಗಳು ಎಂದರೆ ಸರಿ.

(3) ನನ್ನ ಜನ್ಮ ದಿನಾಂಕಃ 20.07.1984 ಆಗಿರುತ್ತದೆ. ನನ್ನ ಅಕ್ಕ 1 ನೇ ವಾದಿಯ ಜನ್ಮ ದಿನಾಂಕ 10.07.1968 ಎಂದರೆ ಸರಿ. ನನ್ನ ತಂದೆ-ತಾಯಿ ಗಡಬನಹಳ್ಳಿಯಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಯರೇಕಟ್ಟೆ ಗ್ರಾಮಕ್ಕೆ 1985 ರಲ್ಲಿ ಬಂದಿರುತ್ತೇವೆ ಎಂದು ನನ್ನ ತಂದೆ ತಾಯಿ ಹೇಳಿದ್ದರು. ನಮ್ಮ ತಂದೆಯ ಭಾಗಕ್ಕೆ ಬಂದ ಗಡಬನಹಳ್ಳಿ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಬಂದಿದ್ದು ಅವುಗಳೆಲ್ಲವೂ ಮಾರಾಟವಾಗಿರುತ್ತದೆ ಎಂದರೆ ನಾವು ಹುಟ್ಟುವ ಪೂರ್ವದಲ್ಲಿಯೇ ಮಾರಾಟವಾಗಿದ್ದವು ಎಂದು ನುಡಿದಿರುತ್ತಾರೆ. ಆ ರೀತಿ ಮಾರಾಟವಾಗಿರುವುದು 1984, 1985, 1990 ಹಾಗೂ 1992 ರಲ್ಲಿ ಕ್ರಯಪತ್ರಗಳು ಆಗಿರುತ್ತವೆ ಎಂದರೆ ಸರಿ ಸದರಿ ಎಲ್ಲಾ ಕ್ರಯಪತ್ರಗಳನ್ನು ನನ್ನ ಅಕ್ಕ ಈ ದಾವೆಯಲ್ಲಿ ಹಾಜರುಪಡಿಸಿದ್ದು ನಾನು ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಎಲ್ಲಾ ಕ್ರಯಪತ್ರಗಳಲ್ಲೂ ನಮ್ಮ ಸೌಕರ್ಯಕ್ಕೆ ಬೇರೆ ಕಡೆ ಆಸ್ತಿಯನ್ನು ಖರೀದಿ ಮಾಡುವ ಸಲುವಾಗಿ ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಗಡಬನಹಳ್ಳಿಯ ಆಸ್ತಿಗಳನ್ನು ಮಾರಾಟ ಮಾಡಿಯೇ ದಾವಾ ಆಸ್ತಿ ಐಟಂ 1 ರಿಂದ 3 ನ್ನು ನನ್ನ ತಾಯಿಯ ಹೆಸರಿಗೆ ಯರೆಕಟ್ಟೆ ಗ್ರಾಮದಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ.ದಾವಾ ಆಸ್ತಿ ಐಟಂ 1 ರಿಂದ 3 ನ್ನು 1992-94 ರ ಆಸುಪಾಸಿನಲ್ಲಿ ಖರೀದಿ ಮಾಡಲಾಗಿರುತ್ತದೆ ಆ ಸಮಯದಲ್ಲಿ ನಾವು ಚಿಕ್ಕಮಕ್ಕಳಾಗಿರುತ್ತೇವೆ. ಸದರಿ ಕ್ರಯದಲ್ಲಿ ನಾವು ಭಾಗವಹಿಸಿರುವುದಿಲ್ಲ ನಾವು ಚಿಕ್ಕಮಕ್ಕಳಾದ ಕಾರಣ ಆ ವಿಚಾರ ನನಗೆ ಗೊತ್ತಿಲ್ಲ ಆದರೆ ನಮ್ಮ ತಂದೆಯವರು ಹೇಳಿದ್ದನ್ನು ತಿಳಿದುಕೊಂಡಿರುತ್ತೇನೆ.

(4) ಯರೆಕಟ್ಟೆ ಗ್ರಾಮದ ಐಟಂ ನಂ. 1 ರಲ್ಲಿ ಅಕ್ರಮವಾಗಿ ಮರಳು ದಸ್ತಾನು ಮಾಡಿರುವ ವಿಚಾರವಾಗಿ ನನ್ನ ತಾಯಿಯ ಹೆಸರಿನಲ್ಲಿ ಕಂದಾಯ ದಾಖಲೆಗಳು ಇದ್ದ ಕಾರಣ ನನ್ನ ವಿರುದ್ಧ ಹಾಗೂ ನನ್ನ ತಾಯಿಯವಿರುದ್ಧ ಹಂದನಕೆರೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ಸಂ. 24/2016 ದಾಖಲಾಗಿತ್ತು ಎಂದರೆ ನಾನು ದಾಸ್ತಾನು ಮಾಡಿರುವುದಿಲ್ಲ ಆದರೆ ದಾಖಲಾಗಿರುತ್ತದೆ ಎಂದು ನುಡಿದಿರುತ್ತಾರೆ.ಸದರಿ

ಪ್ರಕರಣದಲ್ಲಿ ನಾನು ಹಾಗೂ ನನ್ನ ತಾಯಿ ಜಮೀನು ಪಡೆದು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆವು ಎಂದರೆ ಸರಿ. ದಿಃ 14.02.2019 ರಂದು ಇದೇ ನ್ಯಾಯಾಲಯದಲ್ಲಿ ಸದರಿ ಪ್ರಕರಣ ಮುದ್ದತ್ತು ನಿಗದಿಯಾಗಿತ್ತು ಎಂದರೆ ಸರಿ. ಸದರಿ ದಿನಾಂಕದಂದು ನನ್ನ ತಾಯಿ ಬೆಂಗಳೂರಿನಿಂದ ಚಿಕ್ಕನಾಯಕನಹಳ್ಳಿ ಬಂದಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಪ್ರತಿವಾದಿ 2 ಮತ್ತು 3 ರವರು ಈಗ ಎಲ್ಲಿ ಇರುತ್ತಾರೆ ಎಂದು ಗೊತ್ತಿಲ್ಲ. ಅವರನ್ನು ಪತ್ತೆ ಮಾಡುವ ಪ್ರಯತ್ನವನ್ನು ನಾನು ಮಾಡಿರುತ್ತೇನೆ ಸಂಬಂಧಿಕರ ಬಳಿ ವಿಚಾರಿಸಿರುತ್ತೇನೆ ಹಾಗೂ ಪತ್ರಿಕಾ ಪ್ರಕಟಣೆ ಕೊಟ್ಟಿರುತ್ತೇನೆ. ವಾದಿ ದೂರನ್ನು ನೀಡಿರುತ್ತಾರೆ. ದಿಃ 14.02.2019 ರಂದು ಪ್ರಕರಣಕ್ಕೆ ಚಿಕ್ಕನಾಯಕನಹಳ್ಳಿ ನ್ಯಾಯಾಲಯಕ್ಕೆ ಹೋಗಿ ಬರುತ್ತೇವೆ ಎಂದು 2 ಮತ್ತು 3 ನೇ ಪ್ರತಿವಾದಿಯವರು ಹೇಳಿ ವಾದಿಯವರ ಮನೆಯಿಂದ ಬಂದಿದ್ದು ಇಲ್ಲಿಯವರೆಗೂ ಅವರು ಎಲ್ಲಿ ಇರುತ್ತಾರೆ ಎಂದು ಮಾಹಿತಿ ಇಲ್ಲ ಎಂದರೆ ಮುದ್ದತ್ತು ಯಾವ ದಿನಾಂಕ ಇತ್ತು ಎಂದು ನೆನಪಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಆ ವಿಚಾರವಾಗಿ ನನ್ನ ತಂದೆ -ತಾಯಿ ನ್ಯಾಯಾಲಯಕ್ಕೆ ಬಂದ ನಂತರ ವಾಪಸ್ಸು ಬಂದಿರುವುದಿಲ್ಲ ಇದರಲ್ಲಿ ನನ್ನ ಮೇಲೆ ಅನುಮಾನ ಇದೆ ನನ್ನ ಅಕ್ಕ ಹಂದನಕೆರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ. ಈ ವಿಚಾರವಾಗಿ ಹಂದನಕೆರೆ ಪೋಲೀಸ್ ಠಾಣೆಯಲ್ಲಿ ನನ್ನನ್ನು ಕರೆದು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಅವರ ನೀಡದ ದೂರಿನ ಆಧಾರ ಮೇಲೆ ವ್ಯಕ್ತಿಗಳು ಕಾಣೆಯಾಗಿರುತ್ತಾರೆ ಎಂದು 61/2020 ರಂತೆ ಹಂದನಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಹಂದನಕೆರೆ ಪೊಲೀಸ್ ಠಾಣೆ ಲುಕ್‌ಔಟ್ ನೋಟೀಸ್ ಹೊರಡಿಸಿ ವಿಸ್ತೃತವಾದ ತನಿಖೆ ಮಾಡಿರುತ್ತಾರೆ ಎಂದರೆ ಸರಿ. ಇಲ್ಲಿಯವರೆಗೂ ಎಲ್ಲಿ ಇರುತ್ತಾರೆ ಬದುಕಿರುತ್ತಾರೋ ಇಲ್ಲವೋ ಎಂಬುದರ ಬಗ್ಗೆ ಯಾವುದೇ ವಿಚಾರ ತಿಳಿದುಬಂದಿಲ್ಲ ಎಂದರೆ ಸರಿ.

(5) ದಾವಾ ಐಟಂ ನಂ. 1 ರಿಂದ 3 ಆಸ್ತಿಗಳನ್ನು ಇಲ್ಲಿಯವರೆಗೂ ನಾನೇ ಅನುಭವಿಸಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಸದರಿ ಎಲ್ಲಾ ಆಸ್ತಿಗಳು ಅಡಿಕೆ ತೆಂಗು

ಇರುವ ನೀರಾವರಿ ಆಸ್ತಿಗಳು ಎಂದರೆ ಸಾಕ್ಷಿಯು ಬೋರ್ ವೆಲ್ ಇರುತ್ತದೆ ಆದರೆ ನಿಂತು ಹೋಗಿರುತ್ತದೆ ಎಂದು ನುಡಿದಿರುತ್ತಾರೆ. ಅದರಲ್ಲಿ ಎರಡು ಬೋರ್ ವೆಲ್ಗಳು ಇರುತ್ತವೆ. ಸದರಿ ಬೋರ್ ವೆಲ್ ಗಳಿಗೆ ಕೆಇಬಿ ಕನೆಕ್ಷನ್ ಇಲ್ಲಿಯವರೆಗೂ ಇದೆ ಎಂರದೆ ಸರಿ. ಸದರಿ ಎರಡೂ ಬೋರ್ ವೆಲ್ ಗಳು ಸುಸ್ಥಿಯಲ್ಲಿ ಇದ್ದು ಈಗಲೂ ಸಹ ನೀರು ಬರುತ್ತಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂ. 1 ರಿಂದ 3 ದಾವಾ ಸ್ವತ್ತಿನಲ್ಲಿ ಅಡಿಕೆಯಿಂದ 40 ಕ್ವಿಂಟಾಲ್ ಅಡಿಕೆ ,20-30 ಸಾವಿರ ತೆಂಗಿನ ಕಾಯಿ ಉತ್ಪತ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಯನ್ನು ಮನೆಯಿಂದ ಓಡಿಸಾಗಿನಿಂದಲೂ ನಾನು ದಾವಾ ಸ್ವತ್ತಿನ ಫಲ ಅನುಭವಿಸುತ್ತಿದೇನೆ ಎಂದರೆ ಸರಿಯಲ್ಲ.

(6) ನನ್ನ ತಾಯಿ ಸಿದ್ದಗಂಗಮ್ಮ ಎಲ್ಲಾ ವ್ಯವಹಾರಗಳನ್ನು ಯೋಚನೆ ಮಾಡಿಯೇ ಮಾಡುತ್ತಿದ್ದರು ಎಂದರೆ ಸರಿ. ಅವರು ಏನೇ ವ್ಯವಹಾರ ಮಾಡಿದ್ದರೂ ಕುಟುಂಬದ ಒಳಿತಿಗಾಗಿಯೇ ಮಾಡುತ್ತಿದ್ದರು ಎಂದರೆ ಸರಿ. ನಿಡಿ.2 ದಾಖಲೆಯನ್ನು ನಾನು ಹಾಗೂ ನನ್ನ ತಾಯಿಯೇ ಇಬ್ಬರೂ ಸೇರಿ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಮುಂದುವರೆದು ನನ್ನ  ಹಾಗೂ ನನ್ನ ತಾಯಿಯ ವಿರುದ್ಧ ದೂರು ನೀಡಿದ್ದು ನನ್ನ ಅಕ್ಕ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ನಾನು ಸದರಿ ದಾಖಲೆಯನ್ನು ಬರೆದುಕೊಟ್ಟಿರುತ್ತೇನೆ. ಈ ದಾವೆಯಲ್ಲಿ ನನ್ನ ಪ್ರತಿವಾದ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ನಾನು ವಕೀಲರಿಗೆ ಹೇಳಿದ್ದೆ ಬರೆದಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನಾನು ಹೇಳಿದ ಉಳಿದ ಎಲ್ಲಾ ವಿಚಾರಗಳನ್ನು ವಕೀಲರು ಬರೆದಿರುತ್ತಾರೆ. ನಾನು ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡೇ ಸಹಿ ಮಾಡಿರುತ್ತೇನೆ ನಾನು ಯಾವುದೇ ದಾಖಲೆಗೆ ಸಹಿ ಮಾಡಿಬೇಕಾದಲ್ಲಿ ಓದಿ ತಿಳಿದುಕೊಂಡೇ ಸಹಿ ಮಾಡುತ್ತೇನೆ ಎಂದರೆ ಸರಿ. ನಿಡಿ.2 ಕ್ರಯಪತ್ರವನ್ನು  ಪ್ರಶ್ನೆ ಮಾಡಿ ನಾನು ಇಲ್ಲಿಯವೆರೆಗೂ ಯಾವುದೇ ದಾವೆಯನ್ನೂ ಅಥವಾ ಪ್ರಕರಣವನ್ನು ಹೂಡಿರುವುದಿಲ್ಲ.

(7) 1 ನೇ ವಾದಿಗೂ ನನಗೂ ಸುಮಾರು 2010-11 ರಿಂದಲೂ ಮಾತುಕತೆ ಇರುವುದಿಲ್ಲ. 1 ನೇ ವಾದಿ ಶಿಕ್ಷಕರಾಗಿದ್ದು ಬೆಂಗಳೂರಿನ ಸರ್ಕಾರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ಅವರು ವಿವಾಹವಾಗಿ ಅವರ ಕುಟುಂಬದೊಡನೆ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ಅವರು ಒಬ್ಬರೇ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಅವರ ಮಕ್ಕಳು ಅವರ ಜೊತೆಯಲ್ಲಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅವರ ಮಕ್ಕಳು ಎಲ್ಲಿ ವಾಸವಿರುತ್ತಾರೆ ಎಂದು ಗೊತ್ತಿಲ್ಲ, 2 ನೇ ಮಗ ದುಬೈನಲ್ಲಿ ,ಮೊದಲ ಮಗ ಬೆಂಗಳೂರಿನಲ್ಲಿ ಇರುತ್ತಾರೆ ಎಂಬ ಮಾಹಿತಿ ಇದೆ. ಅವರ ಇಬ್ಬರು ಮಕ್ಕಳು ವಿದ್ಯಾವಂತರಾಗಿದ್ದು ಬಹಳಷ್ಟು ದುಡಿಮೆ ಇದೆ ಎಂದರೆ ಇರಬಹುದು. ನಾನು ನನ್ನ ತಂದೆಯವರು ಅವರಿಗೆ ಜಮೀನು ಕೊಡಿಸುವ ಸಮಯದಲ್ಲಿ ಜಮೀನು ಕೊಡಿಸುವ ವ್ಯವಹಾರದಲ್ಲಿ ಭಾಗವಹಿಸಿರುತ್ತೇನೆ. 2007 ರಲ್ಲಿ ಬೆಳಗುಲಿ ಸರ್ವೇ ನಂ. 411 ರಲ್ಲಿ 4 ಎಕರೆಯನ್ನು ಕ್ಯಾತಯ್ಯ ಎನ್ನುವವರಿಂದ ನನ್ನ ತಂದೆ 1 ನೇ ವಾದಿಗೆ ಕೊಡಿಸಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ನನ್ನ ಖಾತೆಯಿಂದ ಹಣವನ್ನು ನೀಡಿರುವುದಿಲ್ಲ ನಾನು 21 ವರ್ಷ ವಯಸ್ಸಿನವನಾಗಿದ್ದು ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ನನ್ನ ತಂದೆ ಹಣ ಕೊಟ್ಟಿರುತ್ತಾರೆ. ಆ ರೀತಿ ನನ್ನ ತಂದೆ ಹಣ ನೀಡಿರುತ್ತಾರೆ ಎಂಬುದನ್ನು ತೋರಿಸುವ ದಾಖಲೆ ಇರುವುದಿಲ್ಲ. ಸದರಿ ಕ್ರಯಪತ್ರ ವ್ಯವಹಾರದಲ್ಲಿ ನಾನಾಗಲೀ ಅಥವಾ ನನ್ನ ತಂದೆಯಾಗಲೀ ಭಾಗವಹಿಸಿದ ಬಗ್ಗೆ ಯಾವುದೇ ಸಹಿ ಮಾಡಿರುವುದಿಲ್ಲ. ನಿಡಿ.3 ದಾಖಲೆಯ ಎಲ್ಲಾ ವಿಚಾರಗಳನ್ನು ಓದಿ ತಿಳಿದುಕೊಂಡೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

(8) ನನ್ನ ಅಕ್ಕ 2 ನೇ ವಾದಿಯ ಗಂಡ ಸಿವಿಲ್ ಕಾಂಟ್ರಾಕ್ಟರ್ ಎಂದರೆ ಸರಿಯಲ್ಲ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ನನ್ನ ವಕೀಲರ ಮುಖಾಂತರ ಪರಿಶೀಲನೆ ಮಾಡಿ ತಿಳಿದುಕೊಂಡಿರುತ್ತೇನೆ. 2 ನೇ ವಾದಿಯ ಗಂಡನ ಹೆಸರು ಶ್ರೀನಿವಾಸ್ ಎಂದರೆ ಸರಿ. ಸಾಕ್ಷಿಗೆ ನಿಪಿ.12 ರಲ್ಲಿರುವ ಛಾಯ ಚಿತ್ರವನ್ನು ತೋರಿಸಿ ಅವರೇ 2 ನೇ ವಾದಿಯ ಗಂಡ ಎಂದರೆ ಸರಿ ಎಂದು ಒಪ್ಪಿರುತ್ತಾರೆ. ನಿಪಿ.12 2 ನೇ ವಾದಿಯ ಗಂಡನ ಪರವಾನಿಗೆ ಎಂದರೆ ಸರಿ, ಆದರೆ ಅವರು ಯಾವುದೇ ಕಾಂಟ್ರಾಕ್ಟ್

ಕೆಲಸ ಮಾಡಿಲ್ಲ ಎಂದು ಹೇಳಿರುತ್ತಾರೆ. ಸದರಿ ಶ್ರೀನಿವಾಸ್ ಪರವಾನಿಗೆ ಹೊಂದಿದ್ದರೂ ಸಹ ಯಾವುದೇ ಕಾಂಟ್ರಾಕ್ಟ್ ಕೆಲಸ ಮಾಡಿಲ್ಲ ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಅವರೇ ನನಗೆ ಹೇಳಿದ್ದರು. 2 ನೇ ವಾದಿಯ ಬ್ಯಾಂಕ್ ಸ್ಟೇಟ್ ಮೆಂಟ್ ನಿಪಿ.16 -17 ನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾಖಲೆಗಳ ಪ್ರಕಾರ ಅವರ ಹಣಕಾಸಿ ಸ್ಥಿತಿ ಸುಸ್ಥಿತಿಯಲ್ಲಿ ಇದೆ ಎಂದರೆ ಸರಿಯಲ್ಲ.

(9) ನಿಡಿ.4 ರಲ್ಲಿ ಇರುವ ಎಲ್ಲಾ ಆಸ್ತಿಗಳು 2 ನೇ ವಾದಿಯವರ ಹಕ್ಕು ಅನುಭವದಲ್ಲಿ ಇರುವ ಆಸ್ತಿಗಳು ಎಂದರೆ ಅವರ ಅನುಭವದಲ್ಲಿಯೇ ಇರುತ್ತವೆ ಆದರೆ ನಮ್ಮ ತಂದೆ ಕೊಡಿಸಿದ್ದರು ಎಂದು ನುಡಿದಿರುತ್ತಾರೆ. ನಿಡಿ.2 ರಲ್ಲಿರುವ ಆಸ್ತಿಯು 1 ನೇ ವಾದಿಯ ಹಕ್ಕು ಸ್ವಾಧೀನದಲ್ಲಿ ಇರುವ ಆಸ್ತಿಗಳು ಎಂದರೆ ಸರಿ, ಮೊದಲು ಅದು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಅದನ್ನು ನಮ್ಮ ಅಕ್ಕ ಬರೆಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಡಿ.4 ರಲ್ಲಿ ಇರುವ ಎಲ್ಲಾ ವಿಷಯಗಳನ್ನು ಓದಿ ತಿಳಿದುಕೊಂಡು ಒಪ್ಪಿಯೇ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಡಿ.4 ವ್ಯವಹಾರದಲ್ಲಿ ನಾನಾಗಲೀ ಅಥವಾ ನನ್ನ ತಂದೆಯವರಾಗಲೀ ಭಾಗವಹಿಸಿರುತ್ತೇವೆ ಎಂದು ತೋರಿಸಿಸಲು ಸದರಿ ದಾಖಲೆಗೆ ಸಹಿ ಮಾಡಿರುವುದಿಲ್ಲ. ನಿಡಿ.4 ರಲ್ಲಿ ನಮೂದು ಮಾಡಿರುವ ಕ್ರಯದ ಹಣ ನಮ್ಮ ಬಳಿ ಇತ್ತು ಎಂದು ತೋರಿಸಲು ನಮ್ಮ ಅಥವಾ ನನ್ನ ತಂದೆಯವರ ಯಾವುದೇ ದಾಖಲೆ ಇರುವುದಿಲ್ಲ. ಸದರಿ ಕ್ರಯದ ವ್ಯವಹಾರ ನಮ್ಮ ತಂದೆ ಮಹಲಿಂಗಯ್ಯ ಮತ್ತು ಮಲ್ಲೇಶಯ್ಯರವರ ನಡುವೆ ಆಗಿರುತ್ತದೆ 2 ನೇ ವಾದಿಗೆ ನಮ್ಮ ತಂದೆ ಕೊಡಿಸಿರುತ್ತಾರೆ. ಈ ವಿಚಾರ ನಿಡಿ.4 ಕ್ರಯಪತ್ರದಲ್ಲಿ ನಮೂದು ಆಗಿರುವುದಿಲ್ಲ. ನಿಡಿ.2 ಮತ್ತು 4 ಆಸ್ತಿಗಳು ವಾದಿಯವರ ಸ್ವಾಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

(10) ನನ್ನ ಮೂಲ ಕಸುಬು ಕೃಷಿಯಾಗಿರುತ್ತದೆ ಎಂದರೆ ಸರಿ. ನನಗೆ ಮಕ್ಕಳು ಇನ್ನು ಇರುವುದಿಲ್ಲ. ದಾವಾ ಸ್ವತ್ತು ಐಟಂ ನಂ.1 ರಿಂದ 4 ಆಸ್ತಿಗಳನ್ನು ನಾನು ಒಟ್ಟಾಗಿ ಅನುಭವಿಸುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ಐಟಂ ನಂ.1 ರಿಂದ 3 ಆಸ್ತಿಗಳಲ್ಲಿನ ಆದಾಯದಿಂದ ನಿಡಿ.5 ಕ್ರಯಪತ್ರದಡಿಯಲ್ಲಿ ದಾವಾ ಸ್ವತ್ತು ಐಟಂ ನಂ4 ದಾವಾ

ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ. 4 ನ್ನು ಖರೀದಿ ಮಾಡಲು ದಾವಾ ಸ್ವತ್ತು ಐಟಂ ನಂ.1 ರಿಂದ 3 ರ ಆದಾಯ ಹೊರತುಪಡಿಸಿ ಬೇರೆ ಆದಾಯದ ಮೂಲ ಇದೆ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ನಮ್ಮ ಅಜ್ಜಿ ಸ್ವಲ್ಪ ಹಣವನ್ನು ದಾನ ಕೊಟ್ಟಿದ್ದರು ಮತ್ತು ನಾನು ಕೆಲಸ ಮಾಡಿಸಿ ಬಂದು ಕೂಡಿಸಿದ ಹಣವನ್ನು ಕೂಡಿಸಿ ಖರೀದಿ ಮಾಡಿರುತ್ತೇನೆ. ನನ್ನ ಅಜ್ಜಿಯ ಹೆಸರು ಗೌರಮ್ಮ ಅವರುಮೃತಪಟ್ಟಿರುತ್ತಾರೆ. ಅವರದು ತರಬೇನಹಳ್ಳಿಯಾಗಿರುತ್ತದೆ. ನನ್ನ ಅಜ್ಜಿ ಗೌರಮ್ಮ ನನ್ನ ತಾಯಿಗೆ ಹಣವನ್ನು ನೀಡಿದ್ದರು ನನ್ನ ತಾಯಿ ನಾನು ಜಮೀನು ಖರೀದಿ ಮಾಡುವಾಗ ನನಗೆ ನೀಡಿರುತ್ತಾರೆ. ನನ್ನ ತಾಯಿ ಹಣ ಕೊಟ್ಟಿರುವ ಬಗ್ಗೆ ದಾಖಲೆ ಇಲ್ಲ. ನಾನು ಕೂಲಿ ಕೆಲಸ ಮಾಡಿದ ಹಣ ನನ್ನ ಬಳಿ ಇತ್ತು ಎಂದು ತೋರಿಸುವ ದಾಖಲೆ ನನ್ನ ಬಳಿಇದೆಯೇ ಎಂದು ನಾನು ಕೂಲಿ ಮಾಡಿದ ಹಣವನ್ನು ನನ್ನ ತಂದೆ -ತಾಯಿಗೆ ಕೊಟ್ಟಿರುತ್ತೇನೆ. ಆ ರೀತಿ ನಾನು ನನ್ನ ತಂದೆ-ತಾಯಿಗೆ ಹಣ ನೀಡಿರುವ ಬಗ್ಗೆ ದಾಖಲೆ ಇರುವುದಿಲ್ಲ. ದಾವಾ ಆಸ್ತಿ 1 ರಿಂದ 3 ಆಸ್ತಿಗಳಳಿಂದ ಬಂದ ಆದಾಯದ ಪ್ರತ್ಯೇಕವಾಗಿ ಲೆಕ್ಕ ಇಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ಕಳೆದ 6 ವರ್ಷಗಳಿಂದ ಲೆಕ್ಕ ಇಟ್ಟಿರುತ್ತೇನೆ. ಅದಕ್ಕೆ ಹಿಂದಿನ ವ್ಯವಹಾರದ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ ನನ್ನ ತಾಯಿಯೇ ವ್ಯವಹಾರ ನೋಡಿಕೊಳ್ಳುತ್ತಿದ್ದರು. ಈ ವಿಚಾರವನ್ನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ ದಾವಾ ಆಸ್ತಿಯಿಂದ ಬರುವ ಎಲ್ಲಾ ಆದಾಯಗಳನ್ನುಒಟ್ಟು ಕುಟುಂಬದ ಆದಾಯವೆಂದೇ ಉಪಯೋಗಿಸಲಾಗುತ್ತಿತ್ತು ಎಂದರೆ ಸರಿ. ದಾವಾ ಐಟಂ ನಂ. 4 ಆಸ್ತಿಯು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿ ಆಸ್ತಿ ಅದರಲ್ಲಿ ನನಗೆ ಯಾವುದೇ ಪ್ರತ್ಯೇಕ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಐಟಂ ನಂ.4 ರಲ್ಲಿ ವಾದಿಯರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

(11) ನನ್ನ ತಾಯಿಗೆ ದಾವಾ ಸ್ವತ್ತು ಐಟಂ ನಂ.1 ರಿಂದ 3 ನ್ನು ಖರೀದಿ ಮಾಡಲು ಯಾವುದೇ ಪ್ರತ್ಯೇಕವಾದ ಆದಾಯ ಮೂಲ ಇರಲಿಲ್ಲ ಎಂದರೆ ಸರಿಯಲ್ಲ.

ಕಡಬನಹಳ್ಳಿ ಗ್ರಾಮದ ಆಸ್ತಿಗಳನ್ನು ಮಾರಾಟ ಮಾಡಿಯೇ ಐಟಂ ನಂ. 1 ರಿಂದ 3 ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿಯನ್ನು ಸರಿಯಾಗಿ ನೋಡಿಕೊಳ್ಳದೇ ಮನೆಯಿಂದ ಹೊರಗಡೆ ಹಾಕಿ ವಾದಿಯವರಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಗಳು ಎಲ್ಲಾ ಆದಾಯವನ್ನುನಾನೇ ಅನುಭವಿಸಬೇಕು ಎಂಬ ಕಾರಣಕ್ಕೆ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ